1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 441/2023**

ಹೆಸರುಃ ರಂಗೇಶಪ್ಪ                                                    ಚಾಸಾಃ 1

ತಂದೆಃ ಭೀಮಪ್ಪ                                                    ಪ್ರಾಸಾ: 1

ವಯಸ್ಸುಃ 73  ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ   ಮೇಳನಾಯ್ಕನ ಕಟ್ಟೆ  ಗ್ರಾಮ , ಚನ್ನಗಿರಿ

ಸಾಕ್ಷಿಗೆ ದಿನಾಂಕಃ 24-06-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-2 ಮತ್ತು 3 ಪರಿಚಿತರು ಚಾಸಾ-4 ನನ್ನ ಮಗ ಚಾಸಾ-5 ನನ್ನ ಹೆಂಡತಿ ಚಾಸಾ-6 ಮತ್ತು 7 ಪರಿಚಿತರು. 1 ನೇ ಆರೋಪಿ ನನ್ನ ತಮ್ಮ, 2 ನೇ ಆರೋಪಿ ಪರಿಚಿತ.

ಸುಮಾರು 8 ವರ್ಷಗಳ ಹಿಂದೆ ಸರ್ವೆ ನಂ 26/8ರ ವಿಚಾರವಾಗಿ ಚಿರಡೋಣಿ ಗ್ರಾಮದಲ್ಲಿನ ಜಮೀನನ್ನು ನಾನು ಗಿರಿಜಮ್ಮ ಎನ್ನುವವರಿದ ಖರೀದಿಸಿದ್ದು, ಸದರಿ ಜಮೀನಿನ ವಿಚಾರವಾಗಿ ನನ್ನ ಮತ್ತು 1 ನೇ ಆರೋಪಿಯ ನಡುವೆ ದಿಃ10-07-2022 ರಂದು  ಮದಾಹ್ನ 3.00 ಗಂಟೆ ಸಮಯದಲ್ಲಿ ಹೊಲದಲ್ಲಿ ಗಲಾಟೆ ನಡೆದಿರುತ್ತದೆ. ಸದರಿ ಸಮಯಕ್ಕೆ ನಾನು ಚಾಸಾ-4 ಮತ್ತು 5 ರವರು ಹಾಜರಿದ್ದೆವು. ಸದರಿ ಸಮಯಕ್ಕೆ 1ನೇ ಆರೋಪಿ ನನ್ನ ಎಡಗೈನ ಮುಂಗೈಗೆ ಕೈಯಿಂದ ಹೊಡೆದಿರುತ್ತಾರೆ.  ನನ್ನ ಮೇಲೆ ಗುದ್ದಾಟ ನಡೆಸಿ ಓಡಿಹೋಗಿರುತ್ತಾರೆ. ಸದರಿ ಸಮಯಕ್ಕೆ ಚಾಸಾ-6 ಮತ್ತು 7 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ.

ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಠಾಣೆಗೆ ಬಂದು ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆ ದೂರಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು .

ನಾನು ನೀಡಿದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಮಾರನೇ ದಿನ ಕೃತ್ಯ ನಡೆದ ಸ್ಥಳವಾದ ಹೊಲಕ್ಕೆ ಬಂದು ಮಧ್ಯಾಹ್ನ 3.00 ಗಂಟೆಗೆ ಮಹಜರು ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯಕ್ಕೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ಸದರಿ ದಾಖಲೆಗೆ ನಾನು ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಯು ಈಗ ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿಪಿ-2 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪೊಲೀಸರಿಗೆ ನಾನು ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಮಹಜರ್ ಗೆ ಮತ್ತು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಮಹಜರ್ ಮರು ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಮಹಜರ್ ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

2014 ರಲ್ಲಿ ಗಿರಿಜಮ್ಮನವರಿಂದ ಜಮೀನನ್ನು ಖರೀದಿಸಿದಾಗಿನಿಂದ ಈ ಗಲಾಟೆ ನಡೆಯುವವರೆಗೂ ನಾನೇ ಸ್ವಾಧೀನದಲ್ಲಿದ್ದೆ ಎಂದರೆ ಸರಿ. ಸದರಿ ಜಮೀನಿನ ವಿಚಾರವಾಗಿ ನನ್ನ ಮತ್ತು ಆರೋಪಿತರ ನಡುವೆ ಅಗಾಗ ಗಲಾಟೆ ನಡೆಯುತ್ತಿತ್ತು

ಎಂದರೆ ಸರಿ. ದಿಃ 07-10-2022 ರಂದು ನಾನು ಚಾಸಾ-4 ಮತ್ತು 5 ರವರೊಂದಿಗೆ ಜಮೀನಿಗೆ ಹೋಗುತ್ತಿದ್ದಾಗ ಆರೋಪಿತರು ನಮ್ಮನ್ನು ಅಡ್ಡಗಟ್ಟಿ ಮಾರ್ಗ ಮಧ್ಯದಲ್ಲಿ ನಿಲ್ಲಿಸಿ ಅವಾಚ್ಯಶಬ್ದಗಳಿಂದ ಬೈಯ್ದರು ಎಂದರೆ ಸರಿ. ಆಗ 2 ನೇ ಆರೋಪಿಯು ಸಹ ನನ್ನ ಮೇಲೆ ಕೈಯಿಂದ ಹಲ್ಲೆ ಮಾಡಿದ ಎಂದರೆ ಸರಿ. ಅಲ್ಲದೆ ಸದರಿ ಜಮೀನಿನ ತಂಟೆಗೆ ಬಂದರೆ ಜೀವಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿದರು ಎಂದರೆ ಸರಿ. ಸದರಿ ಎಲ್ಲಾ ವಿಚಾರಗಳನ್ನು ನಿಪಿ-1 ರಲಿಲ ಹೇಳಿ ನಮೂದಿಸಿರುತ್ತೇನೆ ಎಂದರೆ ಸರಿ.

ಸದರಿ ದೂರಿನ ಹಿನ್ನೆಲೆಯಲ್ಲಿ ದಿನಾಂಕಃ 22-10-2022 ರಂದು ಪೊಲೀಸರು ಮಹಜರನ್ನು ಜರುಗಿಸಲು ಬಂದಿದ್ದರು ಎಂದರೆ ಸರಿ. ಅಗ ಸಮಯ ಸಂಜೆ 5.00 ರಿಂದ 6.00 ಗಂಟೆಯಾಗಿತ್ತು ಎಂದರೆ ಸರಿ.

ನಾನು ನಿಪಿ-1 ರಲ್ಲಿ ಲಕ್ಷ್ಮಮ್ಮ ಮತ್ತು ಶಾರದಮ್ಮರವರು ಇದ್ದರು ಎಂದು ನಮೂದಿಸಿದ್ದು, ನನ್ನ ಮುಂದುವರೆದ ಹೇಳಿಕೆಯಲ್ಲಿ ಸದರಿಯವರು ಗಲಾಟೆಯ ಸಮವಯಕ್ಕೆ ಇರಲಿಲ್ಲ ಮತ್ತು ಸದರಿ ಗಲಾಟೆಯಲ್ಲಿ ಪಾಲ್ಗೊಂಡಿಲ್ಲ ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಎಂ ಟಿ ಎಸ್ ವಕೀಲರಿಂದ –**

1 ನೇ ಆರೋಪಿ ನನ್ನ ವಿರುದ್ಧ ದೂರನ್ನು ದಾಖಲಿಸಿದ ವಿಚಾರ ನನಗೆ ದಿಃ 08-10-2022 ರಂದು ತಿಳಿದಿತ್ತು ಎಂದರೆ ಸರಿ. ಸದರಿ ದೂರಿನ ವಿಚಾರವಾಗಿ ಪೊಲೀಸರು ನಮ್ಮನ್ನು ವಿಚಾರಣೆಗಾಗಿ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಗ ಪೊಲೀಸರು ಜಮೀನಿನ ವಿಚಾರವಾಗಿ 1 ನೇ ಆರೋಪಿ ನಮ್ಮ ವಿರುದ್ಧ ದೂರನ್ನು ದಾಖಲಿಸಿದ ವಿಚಾರ ಗೊತ್ತಾಯಿತು ಎಂದರೆ ಸರಿ . ನಾನು 22-10-2022 ರಂದು ನಿಪಿ-1 ನ್ನು ದಾಖಿಸಿದ್ದು ಗಲಾಟೆ 07-10-2022 ರಂದು ಆಗಿದೆ ಎಂದು ನಮೂದಿಸಿದ್ದು ದೂರನ್ನು ದಾಖಲಿಸಲು ಅದ ಕಾಲ ವಿಳಂಬದ ಬಗ್ಗೆ ಯಾವುದೇ ಕಾರಣವನ್ನು ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. 1ನೇ ಆರೋಪಿ ದೂರನ್ನು ದಾಖಲಿಸಿದ್ದರಿಂದ ನಾನು ನಿಪಿ-1 ನ್ನು ಆತನ ವಿರುದ್ಧ ದಾಖಲಿಸಿದ್ದೇನೆ ಎಂದರೆ ಸರಿ. ನಿಪಿ-1 ನ್ನು ದಾಖಲಿಸಿದ

ದಿನಾಂಕದಂದೇ ಪೊಲೀಸರು ನನಗೆ ಸದರಿ ವಿವಾದಿತ ಜಮೀನಿನ ಕುರಿತು ಯಾವುದಾದರೂ ದಾಖಲೆಗಳಿದ್ದರೆ ಹಾಜರುಪಡಿಸುವಂತೆ ಸೂಚಿಸಿ ನೋಟಿಸನ್ನು ಜಾರಿ ಮಾಡಿದ್ದರು ಎಂದರೆ ಸರಿ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ತದನಂತರ ಹಾಜರುಪಡಿಸಿಲ್ಲ ಎಂದರೆ ಸರಿ. ಗಲಾಟೆಯ ಸಮಯಕ್ಕೆ ನಾನು ,ಚಾಸಾ-4 ಮತ್ತು 5 ರವರು ಹಾಜರಿದ್ದೆವು. ಬೇರೆ ಯಾರು ಇರಲಿಲ್ಲ.

ಸದರಿ ಗಲಾಟೆ 3.00 ರಿಂದ 4.00 ಗಂಟೆಯವರೆಗೂ ನಡೆದಿರುತ್ತದೆ. ಗಲಾಟೆಯ ತರುವಾಯ ನಾನುಊರಿಗೆ ಬಂದಿರುತ್ತೇನೆ. 1ನೇ ಆರೋಪಿ ವ್ಯಾನಿನಲ್ಲಿ ಹೋಗಿ ಆಸ್ಪತ್ರೆಗೆ ಹೋಗಿ ಅಲ್ಲಿಂದ ಠಾಣೆಗೆ ಬಂದಿರುತ್ತಾರೆ.ನನಗೆ ಕುಡುಗೋಲಿನಿಂದ, ಕಲ್ಲಿನಿಂದ ಹೊಡೆದಿರುತ್ತಾರೆ. ನಿಪಿ-1 ರಲ್ಲಿ ಸದರಿ ವಿಚಾರವನ್ನು ನಮೂದಿಸಿಲ್ಲ ಎಂದರೆ ಸರಿ.

1ನೇ ಆರೋಪಿ ದಾಖಲಿಸಿದ ದೂರಿಗೆ ಪ್ರತಿಯಾಗಿ ನಾನು ದೂರನ್ನು ದಾಖಲಿಸಿದ್ದು, ಅದಾದ ತರುವಾಯ 1 ವಾರದ ನಂತರ ಪೊಲೀಸರು ಮಹಜರಿಗೆ ಬಂದಿರುತ್ತಾರೆ. ಸದರಿ ಮಹಜರನ್ನು ಪೊಲೀಸರು 3.00 ರಿಂದ 4.00 ರವರೆಗೆ ಜರುಗಿಸಿದ್ದು, ಅದನ್ನು ನಮಗೆ ಓದಿ ಹೇಳಿಲ್ಲ ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ನಾನು ಚಾಸಾ-2 ಮತ್ತು 3 ರವರೊಂದಿಗೆ ದಿಃ 22-10-2022 ರಂದು ಠಾಣೆಗೆ ಬಂದಿದ್ದೆ ಎಂದರೆ ಸರಿಯಲ್ಲ. ಅದೇ ದಿನದಂದೇ ನಿಪಿ-2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ನಾನು ಹೇಳಿದಂತೆ ಆರೋಪಿತರು ನನ್ನ ಮೇಲೆ ಯಾವುದೇ ಹಲ್ಲೆ ಮಾಡದೇ ಇದ್ದರು ಸಹ ನಾನು ವೈದ್ಯರಿಂದ ಸುಳ್ಳು ಗಾಯದ ಪ್ರ.ಪತ್ರವನ್ನು ಪಡೆದುಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**